

ರತ್ನ ಬಡವನಹಳ್ಳಿ



ಆದರೂ ಅದರ ನಡುವೆಯೇ ಅಡುಗೆ ಮಾಡುವಾಗಲೇ ಅವರು ಅಡುಗೆಗೆಂದು ಹೆಚ್ಚಿಟ್ಟ ತರಕಾರಿ, ಸೊಪ್ಪುಗಳಲ್ಲಿ ಚಿತ್ರಿಸುವ ಕಲಾಕೃತಿಗಳು ಎಂತಹವರನ್ನೂ ಒಂದು ಕ್ಷಣ ಬೆರಗುಗೊಳಿಸುತ್ತದೆ.

'ಬೇರೆಲ್ಲ ಗೃಹಿಣಿಯರಿಗೆ ಬೆಳಿಗ್ಗೆ ತಿಂಡಿ ಮಾಡುವಾಗ, ಮಧ್ಯಾಹ್ನರಾತ್ರಿ ಅಡುಗೆ ಮಾಡುವಾಗ ಎಂತಹ ಒತ್ತಡ ಇರುತ್ತದೆಯೋ ಆ ಒತ್ತಡ ನನಗೂ ಇದೆ. ಆದರೂ ಅದನ್ನು ನಾನು ಒತ್ತಡವಾಗಿ ನೋಡದೆ ಅಡುಗೆ ಮಾಡಲಿಕ್ಕೆಂದು ಹೆಚ್ಚಿಟ್ಟುಕೊಂಡ ತರಕಾರಿ ಮತ್ತು ಸೊಪ್ಪುಗಳಲ್ಲಿ ಅಡುಗೆ ಮನೆಯಲ್ಲೇ ಆ ಕ್ಷಣಕ್ಕೆ ಮನಸ್ಸಿಗೆ ಹೊಳೆದ ಯೋಚನೆಯಂತೆ ಏನೋ ಒಂದನ್ನು ಚಿತ್ರಿಸುತ್ತೇನೆ. ಅದನ್ನು ನಾನು ಮಾತ್ರವೇ ನೋಡಿ ಖುಷಿ ಪಡುತ್ತೇನೆ' ಎನ್ನುವ ರತ್ನ, ಕಳೆದ ಕೆಲವು ವರ್ಷಗಳಿಂದ ಅಡುಗೆ ಮಾಡುವಾಗ ತರಕಾರಿ ಮತ್ತು ಸೊಪ್ಪುಗಳಿಂದ ಕಲಾಕೃತಿ ರಚಿಸುವ ಹವ್ಯಾಸವನ್ನು ತಮ್ಮ ಬದುಕಿನ ಭಾಗವಾಗಿ ಮಾಡಿಕೊಂಡಿದ್ದಾರೆ, ಇದರಿಂದ ಖುಷಿಯಾಗಿಯೂ ಇದ್ದಾರೆ.

ಓದಿನ ದಿನಗಳಿಂದಲೇ ಕಸೂತಿ ಹಾಕುವುದು, ವಿವಿಧ ವಿನ್ಯಾಸದ ಬಟ್ಟೆ ಹೊಲಿಯುವ, ರಂಗೋಲಿ ಹಾಕುವ ಕೆಲಸಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದ ರತ್ನ, ಮದುವೆಯ ನಂತರ ಅದನ್ನು ಹಾಗೇ ಮುಂದುವರೆಸಿಕೊಂಡು ಬಂದವರು. ಅಡುಗೆಗೆ ತರಕಾರಿ ಹೆಚ್ಚುವಾಗ ಆಕರ್ಷಕವಾಗಿ ಕಾಣುವ ತರಕಾರಿಯ ಬಣ್ಣವೇ ಕಾರಣವಾಗಿ, ತಮ್ಮ ಕಲಾಸಕ್ತಿಯಿಂದ ಅದರಲ್ಲೇ ಒಂದು ಚಿತ್ರವನ್ನು ರಚಿಸಿದರೆ ಹೇಗೆಂದುಕೊಂಡು ಒಮ್ಮೆ ಪ್ರಯತ್ನಿಸಿದವರಿಗೆ ತಾವೇ ರಚಿಸಿ, ಕೆಲವೇ ಕೆಲವು ಕ್ಷಣ ಮಾತ್ರ ನೋಡಿ ಖುಷಿ ಪಡಬಹುದಾದ ತರಕಾರಿಯ ಕಲಾಕೃತಿ ರಚಿಸುವುದು ಹವ್ಯಾಸವಾಗಿ ಬಿಟ್ಟಿದೆ. ತಿಂಡಿ ಅಡುಗೆಯೆಲ್ಲ ಅರ್ಜೆಂಟಿನಲ್ಲಿ ಮಾಡಬೇಕಿರುತ್ತದೆ, ಹೀಗಿರುವಾಗ ನೀವು ತರಕಾರಿ ಹೆಚ್ಚಿಟ್ಟು ಅದರಿಂದ ಕಲಾಕೃತಿಯನ್ನೆಲ್ಲ ರಚಿಸುತ್ತಾ ಕುಳಿತರೆ ಮನೆಯ ಸದಸ್ಯರಿಗೆ ತೊಂದರೆಯಾಗುವುದಿಲ್ಲವೇ ಎಂದರೆ, 'ಖಂಡಿತ ನಾನು ಅದಕ್ಕೆ ಅವಕಾಶ ಕೊಡುವುದಿಲ್ಲ. ನಾನು ಪ್ರತೀದಿನವೂ ಬೆಳಿಗ್ಗೆ ಬೇಗ ಏಳುತ್ತೇನೆ ಮತ್ತು ಹಿಂದಿನ ದಿನವೇ ತಿಂಡಿ, ಅಡುಗೆ ಏನೆಂದು ನಿರ್ಧರಿಸಿಕೊಂಡಿರುವುದರಿಂದ ಹತ್ತು ನಿಮಿಷ ಮೊದಲು ಅಡುಗೆ ಆರಂಭಿಸುತ್ತೇನೆ ಮತ್ತು ನನ್ನ ಮನಸ್ಸಿಗೆ ಖುಷಿ ಕೊಡುವ ಈ ಕಲೆಯಲ್ಲಿ ತೊಡಗಿಸಿಕೊಳ್ಳುತ್ತೇನೆ. ಇದರಿಂದಾಗಿ ಮನೆಯ ಯಾರೊಬ್ಬರಿಗೂ ಇಲ್ಲಿಯವರೆಗೆ ತೊಂದರೆಯಾಗಿಲ್ಲ' ಎನ್ನುತ್ತಾರೆ ರತ್ನ.

'ನಿಜ ಹೇಳಬೇಕೆಂದರೆ, ನಮ್ಮ ಯಜಮಾನರು ಮತ್ತು ಮಕ್ಕಳಿಗೆ ಇದರ ಬಗ್ಗೆ ಅಷ್ಟಾಗಿ ತಿಳಿದಿಲ್ಲ. ಅಮ್ಮ ಮಾತ್ರ ಇದನ್ನು ಆಗಾಗ ನೋಡಿ, ಅಡುಗೆಗೆ ಹೆಚ್ಚಿಟ್ಟ ತರಕಾರಿಯಲ್ಲೂ ಇದೇನು ಚಿತ್ರ ನಿನ್ನದು. ಇನ್ನೂ ಮಕ್ಕಳಾಟ ಬಿಟ್ಟಿಲ್ಲ ನೋಡು ನೀನು ಎಂದು ನಕ್ಕು ಸುಮ್ಮನಾಗುತ್ತಾರೆ' ಎಂದು ಕಲೆ ಕೇವಲ ತಮ್ಮ ಖುಷಿಗಾಗಿಯಷ್ಟೇ ಎನ್ನುವುದನ್ನು ಸೂಕ್ಷ್ಮವಾಗಿ ಹೇಳುತ್ತಾರೆ.

ಮೊದಲೆಲ್ಲ ಹೆಚ್ಚಿಟ್ಟ ತರಕಾರಿಯಿಂದ ಮಾಡುತ್ತಿದ್ದ ಈ ಕಲಾಕೃತಿಗಳನ್ನು ತಾವು ಮಾತ್ರವೇ ನೋಡಿ ಖುಷಿ ಪಡುತ್ತಿದ್ದ ರತ್ನ ಅವರು ಈಗ ಬಿಡುವಾದಾಗ ತಮ್ಮ ಬಳಿಯಿರುವ ಮೊಬೈಲಿನಿಂದ ಅದನ್ನು ಕ್ಲಿಕ್ಕಿಸಿ ಇಟ್ಟುಕೊಳ್ಳುತ್ತಾರೆ. ತಮ್ಮ ಆತ್ಮೀಯರಿಗೆ ಅಪರೂಪಕ್ಕೆ ತೋರಿಸುತ್ತಾರೆ ಬಿಟ್ಟರೆ, ಇವರ ಈ ಕಲಾಕೃತಿಯ ಆಯಸ್ಸು ಅಡುಗೆ ಬೇಯುವವರೆಗೆ ಮಾತ್ರ!

'ಮೊದಲಿನಿಂದಲೂ ನನಗೆ ಕಲೆಯೆಂದರೆ ಆಸಕ್ತಿ. ಬೇಡವೆಂದು ಬಿಸಾಕುವ ವಸ್ತುಗಳಿಂದ ಕಲೆ ಅರಳಿಸುವುದು ಎಂದರೆ ಇನ್ನೂ ಹೆಚ್ಚು ಖುಷಿ. ನನ್ನ ಈ ಸ್ವಭಾವವೇ ಅಡುಗೆಯ ಜೊತೆಗೇ ಕಲಾಕೃತಿ ರಚಿಸಿ, ಅದನ್ನು ನಾನೇ ನೋಡಿ ಖುಷಿ ಪಡುವುದಕ್ಕೂ ಕಾರಣವಾಯಿತೇನೋ' ಎನ್ನುವ ರತ್ನ, ಕಸೂತಿ, ಬಟ್ಟೆ ಹೊಲಿಯುವುದು, ಹಣ್ಣಿನ ಬೀಜಗಳಿಂದ ಹೂದಾನಿ ರಚಿಸುವುದು, ಹೂಗಳಿಂದ ರಂಗೋಲಿ ಬಿಡಿಸುವುದು, ಮೆಹಂದಿ ಹಾಕುವುದು, ವಿವಿಧ ವಿನ್ಯಾಸದ ಜಡೆ ಹಾಕುವುದು... ಹೀಗೆ ಹತ್ತು ಹಲವು ಹವ್ಯಾಸಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಇದರೊಂದಿಗೆ ಆಸಕ್ತರಿಗೆ ದೇವರನಾಮ ಕಲಿಸುವ ಮತ್ತು ಕಲಿಯುವುದಕ್ಕೂ ದಿನದ ಒಂದಿಷ್ಟು ಸಮಯವನ್ನು ಎತ್ತಿಟ್ಟಿದ್ದಾರೆ. ಕವನ ಬರೆಯುವುದು ಇವರ ಇನ್ನೊಂದು ನೆಚ್ಚಿನ ಹವ್ಯಾಸ. ಹಲವು ಕವಿಗೋಷ್ಠಿಗಳಲ್ಲೂ ಭಾಗವಹಿಸಿದ ಅನುಭವವಿದೆ.

'ಮೊದಲಿನಿಂದಲೂ ನನಗೆ ಅಡುಗೆ ಮಾಡುವುದೆಂದರೆ ಖುಷಿ. ಅದನ್ನು ನಾನ್ಯಾವತ್ತೂ ಕಷ್ಟ ಎಂದುಕೊಂಡಿಲ್ಲ. ನಾನು ಮಾಡಿದ ಅಡುಗೆಯನ್ನು ಎಲ್ಲರೂ ಖುಷಿ ಪಟ್ಟು ತಿಂದರೆ ಮನಸ್ಸಿಗೇನೋ ಒಂದು ಬಗೆಯ ತೃಪ್ತಿ' ಎಂದು ಹೇಳುತ್ತಾರೆ.

'ಒತ್ತಡದ ನಡುವೆಯೇ ನಾವು ನಮ್ಮ ಮನಸ್ಸಿನ ಖುಷಿಗಾಗಿ ಏನಾದರೂ ಒಂದು ದಾರಿ ಕಂಡುಕೊಳ್ಳಬೇಕಲ್ಲ. ಆಗ ಇಂತಹ ಕಲೆಯನ್ನು ಜೊತೆ ಮಾಡಿಕೊಂಡರೆ ಇರುವ ಕೆಲಸದೊತ್ತಡದ ನಡುವೆಯೂ ಖುಷಿಯಾಗಿರಬಹುದು. ಜೊತೆಗೆ ಮನೆಮಂದಿಯನ್ನೆಲ್ಲ ಖುಷಿಯಾಗಿಡಬಹುದು' ಎಂದು ತಮ್ಮ ಬದುಕಿನ ಖುಷಿಯ ರಹಸ್ಯವನ್ನು ಹೇಳಿಕೊಳ್ಳುತ್ತಾರೆ. ಬಿಡುವಿದ್ದರೆ ಏನಾದರೂ ಒಂದು ಕೆಲಸ ಮಾಡುತ್ತಲೇ ಕಳೆಯುವ ರತ್ನ ಅವರು ಟಿವಿ ಸೀರಿಯಲ್ ನೋಡುವುದೇ ಕಡಿಮೆ. ಸಂಗೀತ ಆಸಕ್ತಿಯ ವಿಷಯವಾದ್ದರಿಂದ ಸಂಗೀತಕ್ಕೆ ಸಂಬಂಧಪಟ್ಟ ರಿಯಾಲಿಟಿ ಶೋಗಳನ್ನು ನೋಡುತ್ತಾರಷ್ಟೇ.

'ನಮ್ಮೆಲ್ಲರ ಬಳಿಯೂ ಸಮಯವಿರುತ್ತದೆ. ಅದನ್ನು ನಾವು ನಮ್ಮ ಖುಷಿಗೆಂದು ಮೀಸಲಿಟ್ಟರೆ ಆ ಖುಷಿಯನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವ ಯೋಚನೆಗಳು ಬರುತ್ತವೆ ಮತ್ತು ಅದು ಇಂತಹ ಹೊಸತನಕ್ಕೆ ಕಾರಣವಾಗುತ್ತದೆ ಎನ್ನುವುದನ್ನು ನಾನು ನಂಬುತ್ತೇನೆ' ಎನ್ನುವ ರತ್ನ ಅವರು, ಗಂಡ ರಂಗನಾಥಾಚಾರ್, ಮಕ್ಕಳಾದ ಸೌಮ್ಯ, ಸಂತೋಷ್ ಹಾಗೂ ತಾಯಿ ನೀಡುವ ಪ್ರೋತ್ಸಾಹದ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.